ವಸೂಲು ಮಾಡಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಅನ್ವಯ ಏಕೆ ಆದೇಶ ಹೊರಡಿಸಬಾರದು ಎಂಬುದಕ್ಕೆ ವಿವರಣೆ ನೀಡುವಂತೆ ಸಹಕಾರ ಸಂಘಗಳ ಅಪರ ನಿಬಂಧಕರು ಸದರಿ ಅಧಿಕಾರಿಗೆ ದಿನಾಂಕ : 30-5-94 ರಂದು ನೋಟೀಸ್ ಅನ್ನು ಜಾರಿ ಮಾಡಿರುವ ಸಂಗತಿ ಮತ್ತು ಸದರಿ ಅಧಿಕಾರಿಯವರು ನೋಟೀಸಿನ ವಿರುದ್ಧ ಕರ್ನಾಟಕ ಉಚ್ಚನ್ಯಾಯಾಲಯದಿಂದ ತಡೆಯಜ್ಞೆಯನ್ನು ಪಡೆದಿರುವ ಸಂಗತಿ, ಆಯ್ಕೆ ಸಮಿತಿಯ ಸಭೆ ಮುಗಿದ ನಂತರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಗಮನಕ್ಕೆ ಬಂದಿದೆ. ಕೃಷಿ ಇಲಾಖೆಯ ಆಪಾದಿತ ಅಧಿಕಾರಿಯ ವಿರುದ್ಧ ಮಾಡಲಾದ ಆರೋಪಗಳು ಇನ್ನೂ ಪ್ರಾರಂಭಿಕ ಹಂತದಲ್ಲಿದ್ದು, ಅವರ ಮೇಲೆ ಇಲಾಖಾ ಶಿಸ್ತು ಪ್ರಕರಣ ಅಥವಾ ನ್ಯಾಯಾಲಯ ಮೊಕದ್ದಮೆಗಳನ್ನು ಇನ್ನೂ ಹೂಡಿಲ್ಲವಾದ್ದರಿಂದ, ಅವರ ಹೆಸರನ್ನು ಐಎಎಸ್‌ಗೆ ಆಯ್ಕೆಗೆ ಶಿಫಾರಸ್ಸು ಮಾಡಿರುವುದು ನಿಯಮಗಳಿಗೆ ಅನುಗುಣವಾಗಿಯೇ ಇದೆ.

ನೀರಾವರಿ ಯೋಜನೆಯಲ್ಲಿ ಇ.ಸಿ.ಎಲ್.ಬಿ. ಉಪಕರಣಗಳ ಅಳವಡಿಕೆ

1729 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೀರಾವರಿ ಯೋಜನೆಯಲ್ಲಿ ಪಂಪು ಸೆಟ್ಟುಗಳನ್ನು ಅಳವಡಿಸುವಾಗ ಇ.ಎಲ್.ಸಿ.ಬಿ. ಉಪಕರಣಗಳನ್ನು ಅಳವಡಿಸಬೇಕೆಂಬ ಸರ್ಕಾರಿ ಆದೇಶ ಇದೆಯೇ?

ಆ) ಇದ್ದರೆ ಎಷ್ಟು ಕಡೆ ಅಳವಡಿಸಲಾಗಿದೆ?

ಈ) ಅಳವಡಿಸದೆ ಇದ್ದರೆ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ನೀರಾವರಿ ಯೋಜನೆಯಲ್ಲಿ ಪಂಪು ಸೆಟ್ಟುಗಳನ್ನು ಅಳವಡಿಸುವಾಗ ಇ.ಎಲ್.ಸಿ.ಬಿ. ಉಪಕರಣಗಳನ್ನು ಅಳವಡಿಸುವುದನ್ನು ಕಡ್ಡಾಯ ಗೊಳಿಸಿರುವುದಿಲ್ಲ.

ಆ) ಪ್ರಶ್ನೆ 'ಅ' ಭಾಗಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ತುಮಕೂರು ಜಿಲ್ಲೆಯಲ್ಲಿ ಆರ್.ಇ.ಪಿ. ಯೋಜನೆಯಡಿ ಸೇರಿಸಲಾದ ಹಳ್ಳಿಗಳು.

1731 - ಶ್ರೀ ಹೆಚ್.ಬಿ. ನಂಜೇಗೌಡ (ತುರುವೇಕೆರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರ್.ಇ.ಪಿ. ಸ್ಕೀಮ್‌ನಲ್ಲಿ ತುಮಕೂರು ಜಿಲ್ಲೆಗೆ ಎಷ್ಟು ಹಳ್ಳಿಗಳನ್ನು ಸೇರಿಸಲಾಗಿದೆ?

ಆ) ತುರುವೇಕೆರೆ ತಾಲ್ಲೂಕಿಗೆ ಮಂಜೂರಾಗಿರುವ ಆರ್.ಇ.ಪಿ. ಸ್ಕೀಂನಲ್ಲಿರುವ ಹಳ್ಳಿಗಳು ಎಷ್ಟು?